# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 238

ಸದಸ್ಯರ ಹೆಸರು : ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಉತ್ತರಿಸುವ ದಿನಾಂಕ : 14.12.2021

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖಾ ವ್ಯಾಪ್ತಿಯಲ್ಲಿರುವ ಉದ್ಯೋಗ ಮಿತ್ರ ಸೊಸೈಟಿಯನ್ನು ಯಾವಾಗ ಸ್ಥಾಪಿಸಲಾಯಿತು; ಇದರ ಉದ್ದೇಶಗಳೇನು; (ವಿವರವಾದ ಮಾಹಿತಿ ನೀಡುವುದು) | ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯನ್ನು 1992 ರಲ್ಲಿ ಸ್ಥಾಪಿಸಲಾಗಿದೆ.<br><br>ಸಂಸ್ಥೆಯು ರಾಜ್ಯದಲ್ಲಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವುದು, ಪ್ರಚಾರ ಮತ್ತು ಬೆಂಗಾವಲು ಸೇವೆಗಳನ್ನು ನೀಡುವ ಉದ್ದೇಶ ಹೊಂದಿದೆ. ರಾಜ್ಯದಲ್ಲಿ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಹೂಡಿಕೆದಾರರಿಗೆ ಸೌಲಭ್ಯಗಳನ್ನು ಮತ್ತು ಉದ್ಯಮಿಗಳಿಗೆ ಲಭ್ಯವಿರುವ ಪ್ರೋತ್ಸಾಹದ ಬಗ್ಗೆ ಜಾಗೃತಿ ಮೂಡಿಸುವುದು.<br><br>ಕರ್ನಾಟಕ ಇಂಡಸ್ಟ್ರೀಸ್ ಫೆಸಿಲಿಟೇಶನ್ ಆಕ್ಟ್, 2002 ಮತ್ತು ನಿಯಮಗಳ ಪ್ರಕಾರ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ ಮತ್ತು ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಯ ಸಚಿವಾಲಯವಾಗಿ ಕಾರ್ಯನಿರ್ವಹಿಸುತ್ತಿದೆ. |
| ಆ | ಸದರಿ ಸೊಸೈಟಿಗೆ ವೃಂದ ಮತ್ತು ನೇಮಕಾತಿ ನಿಯಮಗಳು ಇದೆಯೇ; ಇದ್ದಲ್ಲಿ, ಅದರ ಪ್ರತಿ ಒದಗಿಸುವುದು; | ಇರುವುದಿಲ್ಲ |
| ಇ | ಸದರಿ ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು; (ಸಿಬ್ಬಂದಿಗಳ ಹೆಸರು, ವಿಳಾಸ, ಹುದ್ದೆಯ ಪದನಾಮ, ವೇತನ ಶ್ರೇಣಿ, ಮಾಸಿಕ ಪಡೆಯುತ್ತಿರುವ ವೇತನದೊಂದಿಗೆ ವಿವರವಾದ ಮಾಹಿತಿ ನೀಡುವುದು) | ನಿಗಮದಲ್ಲಿ ನೇರ ನೇಮಕಾತಿ ಹುದ್ದೆಗಳು ಇರುವುದಿಲ್ಲ. ಪ್ರಸ್ತುತ 13 ಅಧಿಕಾರಿಗಳು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಮತ್ತು ಒಬ್ಬ ಅಧಿಕಾರಿ ಕೆಎಸ್ಎಫ್‌ಸಿಯಿಂದ ಪ್ರತಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದಾರೆ.<br><br>36 ಸಹಾಯಕ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗುತ್ತಿದೆ.<br><br>ವಿವರಗಳನ್ನು **ಅನುಬಂಧ**ದಲ್ಲಿ ಲಗತ್ತಿಸಿದೆ. |
| ಈ | ಈ ಸೊಸೈಟಿಯಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳು ಎಷ್ಟು; ಅವು ಯಾವುವು; (ವಿವರವಾದ ಮಾಹಿತಿ ನೀಡುವುದು) | ಅನ್ವಯಿಸುವುದಿಲ್ಲ |

<table>
<tr><td>ಉ</td><td>ಸದರಿ ಸೊಸೈಟಿ ಪ್ರಾರಂಭಗೊಂಡಾಗಿನಿಂದ ಇಲ್ಲಿಯವರೆಗೆ ಯಾವ ಯಾವ ಕಾರ್ಯಕ್ರಮಗಳನ್ನು ನೀಡಲಾದ ಖರ್ಚು ಮಾಡಲಾಗಿರುವ ಹಣ ಎಷ್ಟು; (ಕಾರ್ಯಕ್ರಮವಾರು, ವರ್ಷವಾರು ವಿವರವಾದ ಮಾಹಿತಿ ನೀಡುವುದು)</td><td>
<table>
<tr><th colspan="4">ಕಳೆದ 3 ವರ್ಷಗಳಲ್ಲಿ ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನ / ಖರ್ಚುಗಳ ಮಾಹಿತಿ</th></tr>
<tr><th>ಕ್ರ ಸಂ .</th><th>ವರ್ಷ</th><th>ಖರ್ಚು ಮಾಡಲಾಗಿರುವ ಅನುದಾನ/ಬಜೆಟ್‌ನಲ್ಲಿ ಒದಗಿಸಿದ ಅನುದಾನ</th><th>ಯೋಜನೆ</th></tr>
<tr><td>1</td><td>2018–19</td><td>6,25,00,000</td><td>ರಫ್ತು ಮತ್ತು ವ್ಯಾಪಾರಉತ್ತೇಜನ – ಆಧುನೀಕರಣ</td></tr>
<tr><td>2</td><td>2019–20</td><td>14,92,11,000</td><td>ರಫ್ತು ಮತ್ತು ವ್ಯಾಪಾರಉತ್ತೇಜನ – ಆಧುನೀಕರಣ</td></tr>
<tr><td>3</td><td>2020–21</td><td>5,72,27,140</td><td>ರಫ್ತು ಮತ್ತು ವ್ಯಾಪಾರಉತ್ತೇಜನ – ಆಧುನೀಕರಣ</td></tr>
</table>
</td></tr>
<tr><td>ಊ</td><td>ಈ ಸೊಸೈಟಿಯಿಂದ ಕೈಗಾರಿಕಾ ಸ್ಥಾಪನೆಗೆ ಆಗಿರುವ ಪ್ರಯೋಜನೆಗಳಾವುವು? (ವಿವರವಾದ ಮಾಹಿತಿ ನೀಡುವುದು)</td><td>ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ ಮತ್ತು ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಗಳಿಗೆ ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯು ಸಚಿವಾಲಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಸೊಸೈಟಿ ಪ್ರಾರಂಭದಿಂದ ಇಲ್ಲಿಯವರೆಗೆ ಅನೇಕ ಪ್ರತಿಷ್ಠಿತ ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ಕಂಪನಿಗಳ ವಿವಿಧ ಯೋಜನೆಗಳಿಗೆ ಅನುಮೋದನೆ ದೊರಕಿಸಿಕೊಡುವಲ್ಲಿ ಹಾಗೂ ಅನುಷ್ಠಾನಗೊಳಿಸಲು ಎಲ್ಲಾ ಸಹಕಾರ, ಬೆಂಬಲ ಸೇವೆ ನೀಡಿದ್ದು, ಇದರಿಂದ ಕರ್ನಾಟಕವು ಬಂಡವಾಳ ಆಕರ್ಷಣೆಯಲ್ಲಿ ಮುಂಚೂಣಿಯಲ್ಲಿರುತ್ತದೆ.</td></tr>
</table>

ಸಿಐ 343 ಎಸ್‌ಪಿಐ 2021

(ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು